# ಕರಕುಶಲ ಸೂಚನೆಗಳು – ವೀರರು

ನಂಬಿಕೆಯ ವೀರರು, ಹಂತ 2

## ಸಂಸೋನನ ಕಥೆ

ಸಂಸೋನನ ಜೀವಿತದ ವಿವಿಧ ಭಾಗಗಳ, ಅವನ ಕಥೆಯನ್ನು ತಮಾಷೆಯಾಗಿ ಹೇಳಿದರೆ ಮಕ್ಕಳು ಗಮನಕೊಟ್ಟು ಕೇಳುತ್ತಾರೆ.





### ಸಾಮಗ್ರಿಗಳು

- 1 ಕರಕುಶಲ ವಿಧಾನ
- ಬಣ್ಣಗಳು (ಬಣ್ಣದ ಬಳಪಗಳು, ಪೆನ್, ಇತ್ಯಾದಿ)
- ಗ್ಲೂ (ಗೋಂದು)
- ಪ್ಲಾಸ್ಟಿಕ್ ಸ್ಟ್ರಾ
- ಬ್ರಾಡ್ (ಪೇಪರ್ ಅಂಟು)
- ಕತ್ತರಿಗಳು

### ಸೂಚನೆಗಳು

1. ಕರಕುಶಲ ವಿಧಾನವನ್ನು ಸೂಚನೆಯ ಮೇರೆಗೆ ಕತ್ತರಿಸಿರಿ ಮತ್ತು ಚಿತ್ರಕ್ಕೆ ಬಣ್ಣ ಹಚ್ಚಿರಿ.
2. ಹಾಳೆಯ ಮೇಲಿರುವ ಎರಡೂ ವೃತ್ತದ ಮಧ್ಯದಲ್ಲಿ, ಬ್ರಾಡ್ ಹಾಕಲು ಚಿಕ್ಕದಾಗಿ ತೂತು ಮಾಡಿರಿ. ಇಡೀ ವೃತ್ತ ಕೆಳಗೆ ಹೋಗುತ್ತದೆ ಮತ್ತು ಒಂದು ಭಾಗದಲ್ಲಿ ಕಾಣೆಯಾಗಿರುವ ವೃತ್ತ ಮೇಲಕ್ಕೆ ಹೋಗುವಾಗ ಕೆಳಗಿರುವ ಚಿತ್ರವನ್ನು ನೋಡಬಹುದು.
3. ಪ್ಲಾಸ್ಟಿಕ್ ಸ್ಟ್ರಾ ಮೂರು ತುಂಡುಗಳಾಗಿ ಕತ್ತರಿಸಿರಿ. ಒಂದನ್ನು ಸಂಸೋನನ ಕಣ್ಣುಗಳಿಗೆ ಅಂಟಿಸಿರಿ ಮತ್ತು ಉಳಿದೆರಡನ್ನು ಮೇಲಿನ ವೃತ್ತದಲ್ಲಿರುವ "ಸಂಸೋನ" ಪದಕ್ಕೆ ಅಂಟಿಸಿರಿ.
4. ಹೆಚ್ಚುವರಿ ಕಣ್ಣುಗಳು ಮತ್ತು "ಸಂಸೋನ" ಹೆಸರನ್ನು ಕತ್ತರಿಸಿರಿ ಹಾಗೂ ಅವುಗಳಿಗೆ 3 ಆಯಾಮಗಳಿರುವ ಪ್ರಭಾವವನ್ನು ಕೊಡಲು ಸ್ಟ್ರಾ ತುಂಡುಗಳಿಗೆ ಅಂಟಿಸಿರಿ.

   ಈಗ ಸಂಸೋನನ ಕಥೆಯನ್ನು ಹೇಳಲು ನೀವು ಇವುಗಳನ್ನು ಉಪಯೋಗಿಸಬಹುದು!

## ರಾಜನ ಕಿರೀಟ



### ಸಾಮಗ್ರಿಗಳು

- ಪ್ರತಿಯೊಬ್ಬ ಮಗುವಿಗೂ ಕಿರೀಟದ ವಿಧಾನ
- ಬಣ್ಣದ ಪೇಪರ್ ನಲ್ಲಿ ಡೈಮಂಡ್ ಆಕಾರದಲ್ಲಿ ನಾಲ್ಕು ತುಂಡುಗಳನ್ನು ಮಾಡಿರಿ
- ಬೇರೆ ಬಣ್ಣದ ಪೇಪರ್ ನಲ್ಲಿ ಡೈಮಂಡ್ ಆಕಾರದಲ್ಲಿ ನಾಲ್ಕು ತುಂಡುಗಳನ್ನು ಮಾಡಿರಿ
- ಬಣ್ಣಗಳು (ಬಣ್ಣದ ಬಳಪಗಳು, ಪೆನ್, ಇತ್ಯಾದಿ)
- ಗ್ಲೂ (ಗೋಂದು)
- ರಿಬ್ಬನ್ ಅಥವಾ ದಾರ
- ಮಿನುಗು



### ಸೂಚನೆಗಳು

1. ನಿಮ್ಮ ಮೆಚ್ಚಿನ ಬಣ್ಣದಿಂದ ಕಿರೀಟಕ್ಕೆ ಬಣ್ಣ ಹಚ್ಚಿರಿ.
2. ಕಿರೀಟ ವಿಧಾನವನ್ನು ಕತ್ತರಿಸಿರಿ ಮತ್ತು ದಾರ ಕಟ್ಟಲು ಎರಡೂ ಮೂಲೆಗಳಲ್ಲಿ ಪಂಚ್ ಮಾಡಿರಿ.
3. ಕಿರೀಟದ ಮೇಲ್ಭಾಗದಲ್ಲಿರುವ ವೃತ್ತಗಳಿಗೆ ಮಿನುಗು ಅಂಟಿಸಿರಿ.
4. ದೊಡ್ಡ ಆಕಾರದ ಡೈಮಂಡ್ ಗಳನ್ನು ಅಡ್ಡಗಿರುವ ಗೆರೆಗಳ ನಡುವೆ ಅಂಟಿಸಿರಿ. ಸಣ್ಣ ಆಕಾರದ ಡೈಮಂಡ್ ಗಳನ್ನು ದೊಡ್ಡವುಗಳ ಮೇಲೆ ಅಂಟಿಸಿದರೆ ಅವು ಸಿಂಹಾಸನದ ಒಡವೆಗಳನ್ನು ಪ್ರತಿನಿಧಿಸುತ್ತವೆ.
5. ಕಿರೀಟದ ಮೂಲೆಗಳಿಗೆ ರಿಬ್ಬನ್ ಅಥವಾ ದಾರ ಕಟ್ಟಿರಿ ಹಾಗೂ ಅವುಗಳನ್ನು ಮಕ್ಕಳ ತಲೆಗೆ ಕಟ್ಟಲು ಉಪಯೋಗಿಸಿರಿ.

   ಕಿರೀಟ ಧರಿಸಿಕೊಳ್ಳಲು ಸಿದ್ಧವಾಗಿದೆ! ಅರಸನಾದ ಸೌಲನು, ದಾವೀದನು ಅಥವಾ ಸೊಲೊಮೊನನು ಇವರಲ್ಲಿ ಯಾರ ಕಥೆಗೆ ಬೇಕಾದರೂ ನೀವು ಕಿರೀಟವನ್ನು ಉಪಯೋಗಿಸಬಹುದು.

## ಯೇಸು ಕ್ರಿಸ್ತನೇ ಮಾರ್ಗ (ಡೋರ್ ಹ್ಯಾಂಗರ್)

ಮಕ್ಕಳಿಗೆ ತಮ್ಮ ಮನೆಯ ಬಾಗಿಲುಗಳನ್ನು ಅಥವಾ ಬೇರೆ ಯಾವುದೇ ಭಾಗವನ್ನು ಹ್ಯಾಂಗರ್ ನಿಂದ ಅಲಂಕರಿಸುವದು ಬಹಳ ಖುಷಿಯ ವಿಚಾರವಾಗಿರುತ್ತದೆ.

### ಸಾಮಗ್ರಿಗಳು

- 1 ಹ್ಯಾಂಗರ ವಿಧಾನ
- 3 ಬಿಳಿ ಮೋಡಗಳಿಗಾಗಿ ಬಿಳಿ ಹಾಳೆ

- 2 ಮರದ ಟ್ರಂಕ್ ಗಳಿಗಾಗಿ ಬ್ರೌನ್ ಹಾಳೆ
- 2 ಹಸಿರು ಎಲೆಗಳಿಗಾಗಿ ಹಸಿರು ಹಾಳೆ
- 8 ಕಲ್ಲುಗಳಿಗೆ ಬ್ರೌನ್ ಹಾಳೆ
- ಬಣ್ಣಗಳು (ಬಣ್ಣದ ಬಳಪಗಳು, ಪೆನ್ಸ್, ಇತ್ಯಾದಿ)
- ಕತ್ತರಿಗಳು
- ಗ್ಲೂ (ಗೋಂದು)



**ಸೂಚನೆಗಳು**

1. ಹೊರಗಿನ ಗೆರೆಯೊಂದಿಗೆ ಹ್ಯಾಂಗರ್ ವಿಧಾನವನ್ನು ಕತ್ತರಿಸಿರಿ.
   ಮೇಲ್ಭಾಗದಲ್ಲಿರುವ ವೃತ್ತವನ್ನು ಕತ್ತರಿಸಲು ಮರೆಯಬೇಡಿರಿ.
2. ನಿಮ್ಮ ಮೆಚ್ಚಿನ ಬಣ್ಣವನ್ನು ಹಚ್ಚಿರಿ.
3. ಯೇಸು ಕ್ರಿಸ್ತನ ಚಿತ್ರವಿರುವ ಬಳಿಗೆ ಮೋಡಗಳನ್ನು ಅಂಟಿಸಿರಿ.
4. ಮಾರ್ಗದಲ್ಲಿ ಕಲ್ಲುಗಳನ್ನು ಅಂಟಿಸಿರಿ.
5. ಅಂತಿಮವಾಗಿ ಮಾರ್ಗದಲ್ಲಿ ಗಿಡಗಳನ್ನು ತೋರಿಸಲು ಮರದ ಟ್ರಂಕ್ ಗಳನ್ನು ಮತ್ತು ಎಲೆಗಳನ್ನು ಅಂಟಿಸಿರಿ.
   ಈಗ ಕರಕುಶಲವನ್ನು ಮನೆಗೆ ತೆಗೆದುಕೊಂಡು ಹೋಗಬಹುದು ಮತ್ತು ಅದನ್ನು ಬಾಗಿಲಿಗೆ ಅಥವಾ ಬೇರೆ ಯಾವುದಾದರು ಕಡೆಗೆ ಸಿಕ್ಕಿಸಬಹುದು!